ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಜಿ.ದೈ.ಶಿ.ಅಧಿಕಾರಿಗಳ ಸಭೆ 01/2022-23 ದಿನಾಂಕ: 11.05.2022

**:ಜ್ಞಾಪನಾ:**

ವಿಷಯ: ದಿನಾಂಕ 11-05-2022 ರಂದು ನಡೆದ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿ.

****************

2022-23 ನೇ ಸಾಲಿನ ಕ್ರೀಡಾ ಸ್ಪರ್ಧೆಗಳ ಸಂಘಟನೆ ಮತ್ತು ಇತರೆ ವಿಷಯಗಳ ಬಗ್ಗೆ ದಿನಾಂಕ: 11.05.2022 ರಂದು ಶಿಕ್ಷಕರ ಸದನ ಬೆಂಗಳೂರು ಇಲ್ಲಿ ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಗಳು.

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು | | | |
|---|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ | ಮೊಬೈಲ್ ಸಂಖ್ಯೆ |
| 01 | ಶ್ರೀ ಡಾ. ವಿಶಾಲ್ ಆರ್ | ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು | 080-22214350 |
| 02 | ಶ್ರೀ ಕೃಷ್ಣಾಜಿ ಎಸ್ ಕರಿಚಣ್ಣವರ | ನಿರ್ದೇಶಕರು (ಪ್ರಾ.ಶಿ) ಸಾ.ಶಿ. ಇಲಾಖೆ | 080-22212873 |
| 03 | ಶ್ರೀ ಎನ್. ಕೆಂಚೇಗೌಡ | ಸಹ ನಿರ್ದೇಶಕರು (ದೈ.ಶಿ) ಸಾ.ಶಿ.ಇಲಾಖೆ | 9900835647 |
| 04 | ಶ್ರೀ ವಿ.ಜಯರಾಮಪ್ಪ | ಹಿ.ಸ.ನಿ (ದೈ.ಶಿ), ಆಯುಕ್ತರ ಕಛೇರಿ, ಸಾ.ಶಿ ಇಲಾಖೆ | 9972078205 |
| 05 | ಶ್ರೀ ಎಸ್ ಎನ್ ರಮೇಶ್ | ಹಿ.ಸ.ನಿ (ದೈ.ಶಿ), ಕ.ಪ್ರಾ.ಶಿ.ಪ.ಮಂಡಳಿ, ಸಾ.ಶಿ ಇಲಾಖೆ | 9611237631 |
| 06 | ಶ್ರೀ ವೆಂಕಟೇಶ್ ಮೂರ್ತಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಹಾಸನ ಜಿಲ್ಲೆ | 9663831450 |
| 07 | ಶ್ರೀ ದಾದ್ಮಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಬಾಗಲಕೋಟೆ ಜಿಲ್ಲೆ | 9449473232 |
| 08 | ಶ್ರೀ ತಲಬಕ್ಕನವರ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ವಿಜಯಪುರ ಜಿಲ್ಲೆ | 9945805241 |
| 09 | ಶ್ರೀ ವಸಂತ್ ಭಂಡಾರಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಶಿರಸಿ ಜಿಲ್ಲೆ | 9449060634 |
| 10 | ಶ್ರೀ ಹನುಮಂತ ರೆಡ್ಡಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ | 9740174200 |
| 11 | ಶ್ರೀಮತಿ ವಿಜಯಕುಮಾರಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಬೆಂಗಳೂರು ದಕ್ಷಿಣ ಜಿಲ್ಲೆ | 9886760312 |
| 12 | ಶ್ರೀ ಬಸಪ್ಪ ತೊಗರಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಧಾರವಾಡ ಜಿಲ್ಲೆ | 9886037008 |
| 13 | ಶ್ರೀ ಮಲ್ಲಿಕಾರ್ಜುನಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಮಂಡ್ಯ ಜಿಲ್ಲೆ | 9480191613 |
| 14 | ಶ್ರೀ ಪರಶುರಾಮಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಚಿತ್ರದುರ್ಗ ಜಿಲ್ಲೆ | 9731313141 |
| 15 | ಶ್ರೀ ರುದ್ರಮುನಿಸ್ವಾಮಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ರಾಯಚೂರು ಜಿಲ್ಲೆ | 8217312114 |
| 16 | ಶ್ರೀ ಇಚ್ಚಂಗಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಹಾವೇರಿ ಜಿಲ್ಲೆ | 9448236291 |
| 17 | ಶ್ರೀ ಡಿಗ್ರಜ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಬೆಳಗಾವಿ ಜಿಲ್ಲೆ | 9448864115 |
| 18 | ಶ್ರೀ ನೀಲಕಂಠಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಬೀದರ್ ಜಿಲ್ಲೆ | 9980428879 |
| 19 | ಶ್ರೀ ಮ್ಯಾದಾರ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಗದಗ್ | 9663831450 |
| 20 | ಶ್ರೀ ರಘುನಾಥ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಉಡುಪಿ | 9611542439 |
| 21 | ಶ್ರೀ ನಾಝೀಮ್ ಷಾ ಹುಸೇನಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಬೆಂಗಳೂರು ಗ್ರಾಮಾಂತರ | 9845764736 |
| 22 | ಶ್ರೀ ನರಸಿಂಹಯ್ಯ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಬೆಂಗಳೂರು ಉತ್ತರ | 9972833883 |
| 23 | ಶ್ರೀ ಮಂಜುನಾಥ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಕೋಲಾರ ಜಿಲ್ಲೆ | 9342104603 |



Kiran Raghupathi

| | | | |
|---|---|---|---|
| 24 | ಶ್ರೀ ಸಿದ್ದಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ದಕ್ಷಿಣ ಕನ್ನಡ | 9449687736 |
| 25 | ಶ್ರೀ ಜಗನ್ನಾಥ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ತುಮಕೂರು | 9844464453 |
| 26 | ಶ್ರೀ ಸಿಂದೆ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಕಲಬುರಗಿ | 9060757659 |
| 27 | ಶ್ರೀ ಸಂತಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಬಳ್ಳಾರಿ | 7829612786 |
| 28 | ಶ್ರೀ ಸಾಂಘಲೆ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಉತ್ತರ ಕನ್ನಡ | 9480508523 |
| 29 | ಶ್ರೀ ಪ್ರತಾಪ್ ಸಿಂಗ್ ಠಾಕೂರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ದಾವಣಗೆರೆ | 9845857115 |
| 30 | ಶ್ರೀ ಕೆ. ವೆಂಕಟೇಶ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಕೊಡಗು | 7892661794 |
| 31 | ಶ್ರೀ ಮಹೇಶ್ವರಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಶಿವಮೊಗ್ಗ | 9448964356 |
| 32 | ಶ್ರೀ ಶಂಕರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಚಾಮರಾಜನಗರ | 8073125582 |
| 33 | ಶ್ರೀ ಸಿದ್ದರಾಜು | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಮೈಸೂರು | 8951748361 |
| 34 | ಶ್ರೀ ಸೋಮಶೇಖರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಚಿಕ್ಕಮಗಳೂರು | 9880748630 |
| 35 | ಶ್ರೀ ಹೆಚ್ ಸೋಮಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಯಾದಗಿರಿ | 9900657350 |
| 36 | ಶ್ರೀ ಪಾಟೀಲ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಚಿಕ್ಕೋಡಿ | 9448591764 |
| 37 | ಶ್ರೀ ವಿಜಯಕುಮಾರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಕೊಪ್ಪಳ | 8197354044 |
| 38 | ಶ್ರೀ ನಾರಾಯಣಸ್ವಾಮಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ರಾಮನಗರ | 9964171910 |
| 39 | ಶ್ರೀ ಪರಮೇಶ್ವರಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಮಧುಗಿರಿ | 9900195614 |
| 40 | ಶ್ರೀ ಮಂಜುನಾಥ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ವಿಜಯನಗರ | 9731433373 |

ಶ್ರೀ. ವಿ ಜಯರಾಮಪ್ಪ, ಹಿರಿಯ ಸಹಾಯಕ ನಿರ್ದೇಶಕರು, (ದೈ.ಶಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಸಭೆಯಲ್ಲಿ ಹಾಜರಿದ್ದವರಿಗೆ ಸ್ವಾಗತಿಸಿದರು ಹಾಗೂ ಎಲ್ಲರ ಪರಿಚಯದೊಂದಿಗೆ ಸಭೆಯು ಪ್ರಾರಂಭವಾಯಿತು.

ಮೊದಲಿಗೆ 2019-20 ನೇ ಸಾಲಿನ ಕ್ರೀಡಾಕೂಟಗಳ ಸಂಘಟನೆ ನಡಾವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:**

**1. 2022-23 ನೇ ಸಾಲಿನಲ್ಲಿ ವಿವಿಧ ಹಂತದ ಕ್ರೀಡಾಕೂಟಗಳ ಸಂಘಟನೆ ಬಗ್ಗೆ-**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ 2 ವರ್ಷಗಳಿಂದ ಕೋವಿಡ್-19 ಸನ್ನಿವೇಶದಲ್ಲಿ ಕ್ರೀಡಾಕೂಟಗಳ ಸಂಘಟನೆಯಾಗದೇ ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಬೆಳವಣಿಗೆ ಹಾಗು ಕಲಿಕೆಗೆ ಪೂರಕವಾದ ಪಠ್ಯೇತರ ಚಟುವಟಿಕೆಗಳಾದ ಯೋಗ, ಕ್ರೀಡಾ ಕೌಶಲ್ಯಗಳ ಅಭ್ಯಾಸಗಳಿಂದ ಕಲಿಕೆಗೆ ಪೂರಕವಾದ ಅಂಶಗಳನ್ನು ಪರಿಗಣಿಸಿ ಈ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ(14/17) ವಯೋಮಿತಿಯ ಬಾಲಕ/ಬಾಲಕಿಯರಿಗೆ ಈ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹೋಬಳಿ ಹಂತ, ತಾಲ್ಲೂಕು ಹಂತ, ಜಿಲ್ಲಾ ಹಂತ, ವಿಭಾಗ ಹಂತ ಹಾಗೂ ರಾಜ್ಯ ಹಂತದವರೆಗೆ ಕ್ರೀಡಾಕೂಟಗಳನ್ನು ಸಂಘಟನೆ ಮಾಡಿ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ವೃದ್ಧಿಯಾಗಲಿಕ್ಕೆ ಕ್ರೀಡಾಕೂಟಗಳನ್ನು ಸಂಘಟಿಸುವಂತೆ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು.



Kiran Raghupathi

**2. 2022–23 ನೇ ಸಾಲಿನ ವಾರ್ಷಿಕ ಕ್ರೀಡಾ ಕ್ಯಾಲೆಂಡರ್ ಸಿದ್ಧಪಡಿಸುವ ಬಗ್ಗೆ–**

2022–23 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ 14/17 ವಯೋಮಿತಿಯ ಬಾಲಕ/ಬಾಲಕಿಯರಿಗಾಗಿ ಹೋಬಳಿ ಮಟ್ಟದಿಂದ ರಾಜ್ಯ ಮಟ್ಟದವರೆಗೂ ವಿವಿಧ ಹಂತದ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವಂತೆ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ಆಯೋಜಿಸಲು ತೀರ್ಮಾನಿಸಿದೆ.

1. ಹೋಬಳಿ ಮಟ್ಟದ ಕ್ರೀಡಾಕೂಟಗಳು – ಜುಲೈ 20 ರೊಳಗೆ.
2. ತಾಲ್ಲೂಕು ಮಟ್ಟದ ಕ್ರೀಡಾಕೂಟಗಳು – ಆಗಸ್ಟ್ 30 ರೊಳಗೆ.
3. ಜಿಲ್ಲಾ ಮಟ್ಟದ ಕ್ರೀಡಾಕೂಟಗಳು – ಸೆಪ್ಟಂಬರ್ 15 ರೊಳಗೆ.
4. ವಿಭಾಗ ಮಟ್ಟದ ಕ್ರೀಡಾಕೂಟಗಳು – ಅಕ್ಟೋಬರ್ 20 ರೊಳಗೆ.
5. ರಾಜ್ಯ ಮಟ್ಟದ ಕ್ರೀಡಾಕೂಟಗಳು – ನವಂಬರ್–10 ರೊಳಗೆ.
6. ರಾಜ್ಯ ಮಟ್ಟದ ಅಥ್ಲೆಟಿಕ್ಸ್ – ನವಂಬರ್–30 ರೊಳಗೆ.

ಈ ಮೇಲ್ಕಂಡಂತೆ ಕ್ರೀಡಾಕೂಟಗಳನ್ನು ನಡೆಸಲು ವಾರ್ಷಿಕ ಕ್ರೀಡಾ ಕ್ಯಾಲೆಂಡರ್ ಸಿದ್ಧಪಡಿಸಿದ್ದು, ನಿಗದಿಪಡಿಸಿದ ಅವಧಿಯೊಳಗೆ ಆಯಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರುಗಳು ತಮ್ಮ ಶಾಲೆ, ಹೋಬಳಿ, ತಾಲ್ಲೂಕು ಮತ್ತ ಜಿಲ್ಲೆಗಳ ಕ್ರೀಡಾಕೂಟಗಳ ಸಂಘಟನೆಯನ್ನು ಏರ್ಪಡಿಸಿ ವಿಜೇತರ ಪಟ್ಟಿಯನ್ನು ಸಿದ್ಧಪಡಿಸಿ ಸಂಬಂಧಿಸಿದ ಮೇಲಧಿಕಾರಿಗಳಿಗೆ ಸಲ್ಲಿಸುವುದು.

**3. 2022–23 ನೇ ಸಾಲಿನ ವಿದ್ಯಾರ್ಥಿ ಕ್ರೀಡಾ ನಿಧಿ ವಂತಿಗೆಯನ್ನು ಸಂಗ್ರಹಿಸುವ ಬಗ್ಗೆ:**

2022–23 ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದಡಿಯಲ್ಲಿನ ಸರ್ಕಾರಿ, ಅನುದಾನಿತ, ಅನುದಾನರಹಿತ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ 6 ರಿಂದ 10 ನೇ ತರಗತಿಯವರೆಗಿನ [5 **ನೇ ತರಗತಿ ಮಕ್ಕಳಿಂದ ಯಾವುದೇ ಕಾರಣಕ್ಕೂ ವಿದ್ಯಾರ್ಥಿ ಕ್ರೀಡಾನಿಧಿ ಸಂಗ್ರಹಿಸಬಾರದು**] ಸಮಾಜ ಕಲ್ಯಾಣ ಇಲಾಖೆ ವಸತಿ ಹಾಗೂ ಬಿ.ಬಿ.ಎಂ.ಪಿ ಶಾಲೆಗಳ **SATS** ನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿ ಕ್ರೀಡಾನಿಧಿ ಬೈಲಾದನ್ವಯ 6 ರಿಂದ 7 ನೇ ತರಗತಿಯವರೆಗಿನ ಪ್ರತಿ ಮಕ್ಕಳಿಂದ ರೂ. 10/– ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ 8 ನೇ ತರಗತಿಯ ವಿದ್ಯಾರ್ಥಿಗಳಿಂದ ಹಾಗೂ ಪ್ರೌಢಶಾಲೆಯ 8 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಂದ ರೂ.20/– ಗಳನ್ನು ತಪ್ಪದೇ ಸಂಗ್ರಹಿಸಿ, 2022 ಜುಲೈ–30 ರೊಳಗಾಗಿ ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿಯ ಖಾತೆಗೆ ಸಲ್ಲಿಸುವುದು. ಸದರಿ ವಂತಿಗೆಯಲ್ಲಿ ಕ್ರಮವಾಗಿ 6 ರಿಂದ 7 ನೇ ತರಗತಿಯವರೆಗೆ ಸಂಗ್ರಹವಾದ ಕ್ರೀಡಾನಿಧಿ ವಂತಿಗೆಯಲ್ಲಿ ರೂ.4/– ಹಾಗೂ 8 ರಿಂದ 10ನೇ ತರಗತಿಯವರೆಗೆ ಸಂಗ್ರಹವಾದ ಕ್ರೀಡಾನಿಧಿ ವಂತಿಗೆಯಲ್ಲಿ ರೂ.7/– ರಂತೆ ಮಕ್ಕಳ ಸಂಖ್ಯೆಗನುಗುಣವಾಗಿ ಲೆಕ್ಕ ಹಾಕಿ 2022 ಆಗಸ್ಟ್–31 ರೊಳಗಾಗಿ ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿ ಖಾತೆಗೆ ತಪ್ಪದೇ ನೆಫ್ಟ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಸಲ್ಲಿಸಿ, ವಿವರಗಳೊಂದಿಗೆ ಮಾಹಿತಿಯನ್ನು ಪತ್ರದ ಮುಖೇನ ರಾಜ್ಯ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

**ಖಾತೆಯ ವಿವರ: ಸಿಪಿಐ ವಿಕೆಎನ್, ಖಾತೆಸಂಖ್ಯೆ: 54034600735, ಐಎಫ್ಎಸ್‌ಸಿ ಕೋಡ್: SBIN0040526,**

**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಎಸ್ ಬಿಲ್ಡಿಂಗ್ ಶಾಖೆ, ಬೆಂಗಳೂರು.**



Kiran Raghupathi

ವಿಶೇಷ ಸೂಚನೆ:

- ಸಿ.ಬಿ.ಎಸ್.ಸಿ ಮತ್ತು ಐ.ಸಿ.ಎಸ್.ಸಿ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಶಾಲೆಗಳ ವಿದ್ಯಾರ್ಥಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸಲಾಗುವ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅದರಂತೆ ಸದರಿ ಶಾಲೆಗಳ ಮಕ್ಕಳಿಂದ ವಿದ್ಯಾರ್ಥಿ ಕ್ರೀಡಾನಿಧಿ ವಂತಿಗೆಯನ್ನು ಸಂಗ್ರಹಿಸಬಾರದು.

* ನೋಂದಣಿ ಶುಲ್ಕ ವಸೂಲಾತಿ ಬಗ್ಗೆ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಂದ ವಿವಿಧ ಹಂತದಲ್ಲಿ ನಡೆಯುವ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಕ್ರೀಡಾ ನೋಂದಣಿ ಶುಲ್ಕವನ್ನು ಶಾಲೆಯಲ್ಲಿ ಲಭ್ಯವಿರುವ ಯಾವುದೇ ಅನುದಾನದ ಚಾಲ್ತಿ/ಸಂಚಿತ ನಿಧಿಯಿಂದ ಭರಿಸುವುದು.

2022-23 ನೇ ಸಾಲಿನ ಪ್ರಾಥಮಿಕ/ ಪ್ರೌಢಶಾಲಾ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಈ ಕೆಳಕಂಡ ಪಟ್ಟಿಯಂತೆ ನೋಂದಣಿ ಶುಲ್ಕವನ್ನು ಸಂಗ್ರಹಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರ ಪ್ರತ್ಯೇಕವಾದ ಜಂಟಿ ಖಾತೆಗೆ ನೋಂದಣಿ ಶುಲ್ಕವನ್ನು ಜಮಾ ಮಾಡುವುದು. ಜಮಾ ಮಾಡಿರುವುದಕ್ಕೆ ಪೂರಕ ದಾಖಲೆ ನಿರ್ವಹಿಸತಕ್ಕದ್ದು.

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪ್ರಾಥಮಿಕ ಶಾಲೆ ರೂ.ಗಳಲ್ಲಿ | ಪ್ರೌಢಶಾಲೆ |
|---|---|---|---|
| 1 | 1 ರಿಂದ 100 | 100.00 | 200.00 |
| 2 | 101 ರಿಂದ 150 | 150.00 | 250.00 |
| 3 | 151 ರಿಂದ 250 | 200.00 | 300.00 |
| 4 | 251 ರಿಂದ 500 | 300.00 | 500.00 |
| 5 | 501 ರಿಂದ 750 | 400.00 | 700.00 |
| 6 | 751 ರಿಂದ 1000 | 500.00 | 800.00 |
| 7 | 1000 ಕ್ಕೂ ಹೆಚ್ಚು | 700.00 | 1000.00 |

| ಕ್ರ.ಸಂ | ಸಂಘಟನೆ ಹಂತ | ಪ್ರಾಥಮಿಕ ವಿಭಾಗಕ್ಕೆ ಶೇಕಡಾ | ಪ್ರೌಢ ವಿಭಾಗಕ್ಕೆ ಶೇಕಡಾ | ಪ್ರೌಢಶಾಲಾ ವಿಭಾಗಲ್ಲಿ ನೇರ ತಾಲ್ಲೂಕು ಮಟ್ಟ ಸಂಘಟನೆ ಮಾಡಿದರೆ |
|---|---|---|---|---|
| 1 | ಹೋಬಳಿ ಹಂತ | 65% | 30% | ----- |
| 2 | ತಾಲ್ಲೂಕು ಹಂತ | 25% | 40% | 50% |
| 3 | ಜಿಲ್ಲಾ ಹಂತ | 10% | 30% | 50% |

ಮೇಲ್ಕಂಡಂತೆ ಸಂಗ್ರಹವಾದ ನೋಂದಣಿ ಶುಲ್ಕವನ್ನು ಹೋಬಳಿ, ತಾಲ್ಲೂಕು, ಮತ್ತು ಜಿಲ್ಲಾ ಹಂತದಲ್ಲಿ ವೆಚ್ಚ ಮಾಡಲು ತಿಳಿಸಿದೆ. ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು/ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು

ಉಪ ನಿರ್ದೇಶಕರು/ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು



Kiran Raghupathi

**2022–23 ನೇ ಸಾಲಿನ ವಿಭಾಗಮಟ್ಟ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಸಂಘಟಿಸುವ ಬಗ್ಗೆ ಚರ್ಚಿಸಿ ಈ ಕೆಳಕಂಡಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲು ತೀರ್ಮಾನಿಸಲಾಯಿತು.**

| ಕ್ರಸಂ | ಜಿಲ್ಲೆಯ ಹೆಸರು | ಸಂಘಟಿಸುವ ಕ್ರೀಡೆಗಳು | |
|---|---|---|---|
| | | ವಿಭಾಗ ಮಟ್ಟ | ರಾಜ್ಯ ಮಟ್ಟ |
| | **ಬೆಂಗಳೂರು ವಿಭಾಗ** | | |
| 01 | ಬೆಂಗಳೂರು ಉತ್ತರ | ಹಾಕಿ 14/17<br>ಕ್ರಿಕೆಟ್ 14/17 | ಕ್ರಿಕೆಟ್ 14/17<br>ವಾಲಿಬಾಲ್ 14 |
| 02 | ಬೆಂಗಳೂರು ದಕ್ಷಿಣ | ಬಾಸ್ಕೆಟ್ ಬಾಲ್ 14/17<br>ಷಟಲ್ ಬ್ಯಾಡ್ಮಿಂಟನ್ 14/17 | ಈಜು ಮತ್ತು ಡೈವಿಂಗ್ 14/17<br>ಜಂಪ್ ರೋಪ್ 14/17 |
| 03 | ಬೆಂಗಳೂರು ಗ್ರಾಮಾಂತರ | ಯೋಗಾಸನ 14/17 | --- |
| 04 | ಕೋಲಾರ | ಕಬ್ಬಡ್ಡಿ 14/17 | ಜೂಡೋ 14/17 |
| 05 | ತುಮಕೂರು | ಬಾಲ್ ಬ್ಯಾಡ್ಮಿಂಟನ್ 14/17 | ಬಾಲ್ ಬ್ಯಾಡ್ಮಿಂಟನ್ 17 |
| 06 | ಮಧುಗಿರಿ | ಥ್ರೋ ಬಾಲ್ 14 | ವಿಶೇಷ ಚೇತನ ಮಕ್ಕಳ ಅಥ್ಲೆಟಿಕ್ಸ್ 14/17 |
| 07 | ಚಿತ್ರದುರ್ಗ | ಹ್ಯಾಂಡ್ ಬಾಲ್ 14/17 | ಹ್ಯಾಂಡ್ ಬಾಲ್ 14/17 |
| 08 | ಶಿವಮೊಗ್ಗ | ಫುಟ್ ಬಾಲ್ 14/17 | ಯೋಗಾಸನ 14/17<br>ಫುಟ್ ಬಾಲ್ 14/17 |
| 09 | ದಾವಣಗೆರೆ | ಖೋ–ಖೋ 14/17 | ಖೋ–ಖೋ 14/17 |
| 10 | ರಾಮನಗರ | ಥ್ರೋ ಬಾಲ್ 17 | ಕಬ್ಬಡ್ಡಿ 14/17 |
| 11 | ಚಿಕ್ಕಬಳ್ಳಾಪುರ | ವಾಲಿಬಾಲ್ 14/17 | ---- |
| | **ಬೆಳಗಾವಿ ವಿಭಾಗ** | | |
| 12 | ಚಿಕ್ಕೋಡಿ | ಖೋ–ಖೋ 14/17<br>ಕ್ರಿಕೆಟ್ 14/17 | --- |
| 13 | ಬೆಳಗಾವಿ | ಫುಟ್ ಬಾಲ್ 14/17 | ಸ್ಕೇಟಿಂಗ್ 14/17 |
| 14 | ವಿಜಯಪುರ | ಕಬ್ಬಡ್ಡಿ 14/17 | ಕುಸ್ತಿ 14/17 |
| 15 | ಬಾಗಲಕೋಟೆ | ಹಾಕಿ 14/17<br>ಯೋಗಾಸನ 14/17 | --- |
| 16 | ಧಾರವಾಡ | ಬಾಸ್ಕೆಟ್ ಬಾಲ್ 14/17 | ಜಿಮ್ನಾಸ್ಟಿಕ್ 14/17 |
| 17 | ಗದಗ | ಹ್ಯಾಂಡ್ ಬಾಲ್ 14/17 | --- |
| 18 | ಹಾವೇರಿ | ವಾಲಿಬಾಲ್ 14/17 | ವಾಲಿಬಾಲ್ 17 |
| 19 | ಉತ್ತರ ಕನ್ನಡ | ಥ್ರೋ ಬಾಲ್ 14/17 | ಚೆಸ್ 14/17 |
| 20 | ಶಿರಸಿ ಶೈಕ್ಷಣಿಕ ಜಿಲ್ಲೆ | ಬಾಲ್ ಬ್ಯಾಡ್ಮಿಂಟನ್ 14/17<br>ಷಟಲ್ ಬ್ಯಾಡ್ಮಿಂಟನ್ 14/17 | --- |
| ಕ್ರಸಂ | ಜಿಲ್ಲೆಯ ಹೆಸರು | ಸಂಘಟಿಸುವ ಕ್ರೀಡೆಗಳು | |
| | | ವಿಭಾಗ ಮಟ್ಟ | ರಾಜ್ಯ ಮಟ್ಟ |
| | **ಕಲಬುರಗಿ ವಿಭಾಗ** | | |
| 21 | ಯಾದಗಿರಿ | ಕಬ್ಬಡ್ಡಿ 14/17 | --- |
| 22 | ರಾಯಚೂರು | ವಾಲಿಬಾಲ್ 14/17 | ಟೇಬಲ್ ಟೆನ್ನಿಸ್ 14 |



Kiran Raghupathi

| | | | |
|---|---|---|---|
| 23 | ಕೊಪ್ಪಳ | ಥ್ರೋ ಬಾಲ್ 14/17<br>ಹ್ಯಾಂಡ್ ಬಾಲ್ 14/17 | ಥ್ರೋ ಬಾಲ್ 14/17 |
| 24 | ಕಲಬುರಗಿ | ಷಟಲ್ ಬ್ಯಾಡ್ಮಿಂಟನ್ 14/17<br>ಕ್ರಿಕೆಟ್ 14/17 | ಲಾನ್ ಟೆನ್ನಿಸ್ 14/17 |
| 25 | ಬೀದರ್ | ಖೋ-ಖೋ 14/17<br>ಯೋಗಾಸನ 14/17 | |
| 26 | ಬಳ್ಳಾರಿ | ಷಟಲ್ ಬ್ಯಾಡ್ಮಿಂಟನ್ 14/17<br>ಹಾಕಿ 14/17<br>ಬಾಸ್ಕೆಟ್ ಬಾಲ್ 14/17 | ಬಾಸ್ಕೆಟ್ ಬಾಲ್ 14/17 |
| | **ಮೈಸೂರು ವಿಭಾಗ** | | |
| 27 | ಮೈಸೂರು | ಥ್ರೋ ಬಾಲ್ 14/17 | ಅಥ್ಲೆಟಿಕ್ಸ್ 14/17 |
| 28 | ಚಾಮರಾಜನಗರ | ಷಟಲ್ ಬ್ಯಾಡ್ಮಿಂಟನ್ 14/17 | ---- |
| 29 | ಮಂಡ್ಯ | ಬಾಸ್ಕೆಟ್ ಬಾಲ್ 14/17<br>ಹ್ಯಾಂಡ್ ಬಾಲ್ 14/17 | ---- |
| 30 | ಹಾಸನ | ಕ್ರಿಕೆಟ್ 14/17<br>ಬಾಲ್ ಬ್ಯಾಡ್ಮಿಂಟನ್ 14/17 | ನೆಟ್ ಬಾಲ್ 14/17 |
| 31 | ಚಿಕ್ಕಮಗಳೂರು | ವಾಲಿಬಾಲ್ 14/17 | ---- |
| 32 | ದಕ್ಷಿಣ ಕನ್ನಡ | ಕಬ್ಬಡ್ಡಿ 14/17<br>ಫುಟ್ ಬಾಲ್ 14/17 | ಕರಾಟೆ 14/17 |
| 33 | ಕೊಡಗು | ಹಾಕಿ 14/17 | ಹಾಕಿ 14/17 |
| 34 | ಉಡುಪಿ | ಖೋ-ಖೋ 14/17<br>ಯೋಗಾಸನ 14/17 | ಷಟಲ್ ಬ್ಯಾಡ್ಮಿಂಟನ್ 14/17 |

ರಾಜ್ಯದ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಕ್ರೀಡಾಕೂಟವನ್ನು ಸಂಘಟಿಸುವ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಹಾಗೂ ತೊಂದರೆಗಳು ಉದ್ಭವಿಸುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಈ ಹಿನ್ನೆಲೆಯಲ್ಲಿ 2022-23 ನೇ ಸಾಲಿನ ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡೆಗಳನ್ನು ಸಂಘಟಿಸುವ ಸಂದರ್ಭದಲ್ಲಿ ಯಾವುದೇ ಸಮಸ್ಯೆಗಳು, ತೊಂದರೆಗಳು ಅಥವಾ ಲೋಪಗಳು ಕಂಡುಬಂದಲ್ಲಿ ಖುದ್ದಾಗಿ ರಾಜ್ಯದ ಎಲ್ಲಾ ಉಪ ನಿರ್ದೇಶಕರು ಆಡಳಿತ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಾವುದೇ ಸಮಸ್ಯೆಗಳು ಬಾರದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

**4. ವಿದ್ಯಾರ್ಥಿ ಕ್ರೀಡಾ ನಿಧಿ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಏಕರೂಪ ಜಂಟಿಖಾತೆ ತೆರೆಯುವ ಬಗ್ಗೆ:**

ಈಗಾಗಲೇ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ವಿದ್ಯಾರ್ಥಿ ಕ್ರೀಡಾ ನಿಧಿಯ ಹಣಕಾಸಿನ ನಿರ್ವಹಣೆ ಸಲುವಾಗಿ ವಿವಿಧ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆರೆಯಲಾಗಿರುವ ಜಂಟಿ ಖಾತೆಯನ್ನು ಕೆಳಕಂಡಂತೆ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಏಕರೂಪವಾಗಿ ಖಾತೆಯ ಹೆಸರನ್ನು ಬದಲಾಯಿಸಿಕೊಳ್ಳಲು ತಿಳಿಸಲಾಯಿತು.

**ತಾಲ್ಲೂಕು ಹಂತ: ತಾಲ್ಲೂಕು ವಿದ್ಯಾರ್ಥಿ ಕ್ರೀಡಾ ನಿಧಿ** **ಜಿಲ್ಲಾ ಹಂತ: ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿ**



Kiran Raghupathi

ವಿ.ಕೆ.ಎನ್ ಖಾತೆಯ ಹಣಕಾಸಿನ ವ್ಯವಹಾರದ ಸಂದರ್ಭದಲ್ಲಿ ಆಯಾ ಬ್ಯಾಂಕಿನಿಂದ ಬ್ಯಾಂಕ್ ಕಲೆಕ್ಷನ್ ಚಾರ್ಜ್ ಕಟಾವಣೆ ಮಾಡಲಾಗುತ್ತಿದ್ದು, ಏನಿಮಯ ಶುಲ್ಕದ ಬಗ್ಗೆ ಆಯಾ ಬ್ಯಾಂಕ್ ವ್ಯವಸ್ಥಾಪಕರನ್ನು ಸಂಪರ್ಕಿಸಿ ವಿ.ಕೆ.ಎನ್ ಖಾತೆಯಲ್ಲಿನ ಹಣವನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಬಳಸುತ್ತಿರುವುದರಿಂದ ಇದರಲ್ಲಿ ಯಾವುದೇ ರೀತಿಯ ಬ್ಯಾಂಕ್ ಚಾರ್ಜಸ್ ಕಟಾವಣೆ ಮಾಡದಿರಲು ಪತ್ರದ ಮೂಲಕ ಮನವಿ ಮಾಡಿಕೊಳ್ಳಲು ತಿಳಿಸಲಾಯಿತು.

ಶಾಲೆಯಲ್ಲಿ ಸಂಗ್ರಹವಾಗುವ ಶುಲ್ಕವನ್ನು ತಿಂಗಳಿಗೆ ಎರಡು ಕಂತುಗಳಲ್ಲಿ ಬ್ಯಾಂಕಿಗೆ ಜಮಾ ಮಾಡುವಂತೆ ಶಾಲಾ ಮುಖ್ಯಸ್ಥರಿಗೆ ಮಾಹಿತಿ ತಿಳಿಸುವಂತೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಕ್ರಮ ವಹಿಸುವಂತೆ ತಿಳಿಸಲಾಯಿತು.

5. **2022-23 ನೇ ಸಾಲಿಗೆ ಜಿಲ್ಲೆಯಲ್ಲಿ ಸಂಗ್ರಹವಾದಲ್ಲಿ ವಿದ್ಯಾರ್ಥಿ ಕ್ರೀಡಾ ನಿಧಿಯ ಆಯವ್ಯಯ (ಬಜೆಟ್) ವನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸುವ ಬಗ್ಗೆ:**

ಆಯವ್ಯಯವನ್ನು ತಯಾರಿಸಿ ಅನುಮೋದನೆ ಪಡೆದು ವೆಚ್ಚ ಮಾಡಲು ನಿಯಮವಿದ್ದರೂ ಕೆಲ ಜಿಲ್ಲೆಯವರು ಆಯವ್ಯಯ ತಯಾರಿಸಿ ಅನುಮೋದನೆ ಪಡೆಯದಿರುವ ಬಗ್ಗೆ ಸಭೆಯ ಗಮನ ಸೆಳೆಯಲಾಯಿತು. ಈ ರೀತಿ ನೇರವಾಗಿ ವಿಕೆಎನ್ ಹಣವನ್ನು ವೆಚ್ಚ ಮಾಡುವುದು ನಿಯಮಬಾಹಿರವಾಗಿರುತ್ತದೆ. ಇನ್ನು ಮುಂದೆ ಕಡ್ಡಾಯವಾಗಿ ಆಯವ್ಯಯ ತಯಾರಿಸಿ, ಜುಲೈ ಕೊನೆಯವಾರದೊಳಗೆ ಅನುಮೋದನೆ ಪಡೆದು, ವೆಚ್ಚ ಮಾಡಲು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ರವರು ಸೂಚಿಸಿದರು. ಕೇಂದ್ರ ಕಛೇರಿಯ ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿಗೆ ಕಳುಹಿಸಬೇಕಾದ ವಂತಿಗೆಯನ್ನು 2022 ಆಗಸ್ಟ್-31 ರೊಳಗಾಗಿ ಸಲ್ಲಿಸಲು ತಿಳಿಸಿದೆ. ಆಯಾ ಜಿಲ್ಲೆಗಳಲ್ಲಿ ಸಂಗ್ರಹವಾಗುವ ವಿದ್ಯಾರ್ಥಿ ಕ್ರೀಡಾನಿಧಿಯಲ್ಲಿ ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿ ವಂತಿಗೆಯನ್ನು ಸಲ್ಲಿಸಿ ಉಳಿದ ಕ್ರೀಡಾ ನಿಧಿಯಲ್ಲಿ ಆಯಾ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಹಾಗೂ ಉತ್ತಮ ಫಲಿತಾಂಶವನ್ನು ಹೊಂದಿರುವ ಕ್ರೀಡೆಗಳಿಗೆ ಪ್ರಥಮ ಆದ್ಯತೆಯನ್ನು ನೀಡಿ ಆಯವ್ಯಯವನ್ನು ಸಿದ್ಧಪಡಿಸಲು ಸಭೆಯಲ್ಲಿ ಸಮ್ಮತಿಸಿ ತೀರ್ಮಾನಿಸಲಾಯಿತು.

**ಆಯವ್ಯಯ ವಿಶೇಷ ಸೂಚನೆ:**

- ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿ ಖಾತೆಯಲ್ಲಿ (ಸಂಚಿತ ನಿಧಿ) ಬಾಕಿ ಉಳಿಕೆ ನಮೂದಿಸಿರಬೇಕು ಆದರೆ ಹಂಚಿಕೆ ಮಾಡುವಂತಿಲ್ಲ ಹಾಗೂ ಈ ವರ್ಷದ ಆದಾಯದಲ್ಲಿ ಸೇರಿಸುವಂತಿಲ್ಲ.
- ಪ್ರಸ್ತುತ ವರ್ಷದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆಗನುಗುಣವಾಗಿ ಆಯವ್ಯಯ ಪ್ರಸ್ತಾವನೆ ತಯಾರಿಸುವುದು.
- ಪ್ರಸ್ತುತ ವರ್ಷದಲ್ಲಿ ರಾಜ್ಯ ವಂತಿಗೆಯನ್ನು ಎಷ್ಟು ಸಲ್ಲಿಸಬೇಕು ಎಂಬುದರ ಬಗ್ಗೆ ಮೀಸಲಿರಿಸಿ ಆಯವ್ಯಯ ಸಿದ್ಧಪಡಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಹಂತದ ಕಛೇರಿಗಳಿಗೆ ಸಾದಿಲ್ವಾರು ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿಯಿಂದ ಹಣವನ್ನು ಹಂಚಿಕೆ ಮಾಡಿಕೊಳ್ಳುವುದು.
- ಯಾವುದೇ ಕಾರಣಕ್ಕೂ ಆಯವ್ಯಯವನ್ನು ತಯಾರಿಸುವಾಗ ಪ್ರಸ್ತುತ ವರ್ಷದಲ್ಲಿ ಸಂಗ್ರಹವಾಗುವ ಮೊತ್ತಕ್ಕೂ ಖರ್ಚು ಭರಿಸುವ ಮೊತ್ತಕ್ಕೂ ಹೆಚ್ಚುವರಿ ವ್ಯತ್ಯಾಸವಾಗದಂತೆ ಸರಿದೂಗಿಸುವುದು.
- ವಿದ್ಯಾರ್ಥಿ ಕ್ರೀಡಾನಿಧಿಯ ಹಣವನ್ನು ಕ್ರೀಡಾ ಚಟುವಟಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಚಟುವಟಿಕೆಗಳಿಗೆ ಬಳಸುವಂತಿಲ್ಲ.
- ವಿದ್ಯಾರ್ಥಿ ಕ್ರೀಡಾನಿಧಿ ಖಾತೆಗಳಲ್ಲಿನ ಸಂಚಿತ ನಿಧಿಯಿಂದ ಖರ್ಚು ಭರಿಸುವಂತಿಲ್ಲ. ಆದಾಗ್ಯೂ ವಿಶೇಷ ಸಂದರ್ಭಗಳಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಹಣಕಾಸಿನ ಅಗತ್ಯವಿದ್ದಲ್ಲಿ ಸೂಕ್ತ



Kiran Raghupathi

ಪ್ರಸ್ತಾವನೆ ಸಲ್ಲಿಸಿ ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ)ರವರ ಅನುಮತಿ ಪಡೆದ ನಂತರವೇ ಖರ್ಚು ಭರಿಸತಕ್ಕದ್ದು.

**6. 2022-23 ನೇ ಸಾಲಿಗೆ ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ಕ್ರೀಡಾ ಸಂಘಟನೆಗಾಗಿ ಖರ್ಚು ಮಾಡುವ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಸಾದಿಲ್ವಾರು ವೆಚ್ಚ ಪರಿಷ್ಕರಿಸುವ ಬಗ್ಗೆ:**

ಹಲವು ವರ್ಷಗಳಿಂದ ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ಕ್ರೀಡಾಕೂಟಗಳ ಸಂಘಟನೆಗಾಗಿ ಭರಿಸುತ್ತಿರುವ ಮೊತ್ತವು ಕಡಿಮೆ ಇದ್ದು, ಇತ್ತೀಚಿನ ದಿನಗಳಲ್ಲಿ ಎಲ್ಲಾ ದರಗಳು ಹೆಚ್ಚಾಗಿರುವುದರಿಂದ ಆಯಾ ಜಿಲ್ಲೆಯಲ್ಲಿ ಹಣಕಾಸಿನ ಲಭ್ಯತೆ ಇದ್ದಲ್ಲಿ, ಈ ಕೆಳಕಂಡಂತೆ ಷರತ್ತುಗಳನ್ವಯ ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿಯಿಂದ ಖರ್ಚು ಮಾಡುವ ಮೊತ್ತವನ್ನು ಪರಿಷ್ಕರಿಸಲಾಗಿದೆ.

| ಕ್ರ ಸಂ | ಪ್ರಾಥಮಿಕ ಶಾಲೆಗಳಿಗೆ | ಮೊತ್ತ | ಪ್ರೌಢಶಾಲೆಗಳಿಗೆ | ಮೊತ್ತ |
|---|---|---|---|---|
| 1 | ಹೋಬಳಿ/ವೃತ್ತ/ಕ್ಲಸ್ಟರ್ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ | ಕನಿಷ್ಠ: 4000/- ಗರಿಷ್ಠ: 7000/- | ಹೋಬಳಿ/ವೃತ್ತ/ಕ್ಲಸ್ಟರ್ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ | ಕನಿಷ್ಠ: 4000/- ಗರಿಷ್ಠ: 7000/- |
| 2 | ತಾಲ್ಲೂಕು ಹಂತದ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ | ಕನಿಷ್ಠ: 20,000/- ಗರಿಷ್ಠ: 35,000/- | ತಾಲ್ಲೂಕು ಹಂತದ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ | ಕನಿಷ್ಠ: 20,000/- ಗರಿಷ್ಠ: 35,000/- |
| 3 | ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ ಹಾಗೂ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್. | ಕನಿಷ್ಠ: 45,000/- ಗರಿಷ್ಠ: 85,000/- | ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಎಲ್ಲಾ ಆಟಗಳಿಗೂ ಸೇರಿ ಹಾಗೂ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್. | ಕನಿಷ್ಠ: 50,000/- ಗರಿಷ್ಠ: 90,000/- |
| | ಒಟ್ಟು ರೂಪಾಯಿಗಳು | 1,30,000/- | | 1,40,000/- |

| ಕ್ರಮ ಸಂಖ್ಯೆ | ವೆಚ್ಚ | ಪ್ರಾಥಮಿಕ ಶಾಲೆಗಳಿಗೆ | ಪ್ರೌಢಶಾಲೆಗಳಿಗೆ |
|---|---|---|---|
| 1 | ತಾಲ್ಲೂಕು ಸಾದಿಲ್ವಾರು ವೆಚ್ಚಕ್ಕಾಗಿ | ಕನಿಷ್ಠ: 3,000/- ಗರಿಷ್ಠ: 8,000/- | ಕನಿಷ್ಠ: 5,000/- ಗರಿಷ್ಠ: 10,000/- |
| 2 | ಜಿಲ್ಲಾ ಸಾದಿಲ್ವಾರು ವೆಚ್ಚಕ್ಕಾಗಿ | ಕನಿಷ್ಠ: 8,000/- ಗರಿಷ್ಠ: 17,000/- | ಕನಿಷ್ಠ: 10,000/- ಗರಿಷ್ಠ: 20,000/- |
| 3 | ವಿಶೇಷ ಚೇತನ ಮಕ್ಕಳ ಕ್ರೀಡಾಕೂಟ- 30,000/- | | |



Kiran Raghupathi

**ಷರತ್ತು:** ಕ್ರೀಡಾ ಸಂಘಟನೆಗಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಉಪನಿರ್ದೇಶಕರಿಂದ ಅನುಮೋದನೆ ಪಡೆದು ಮುಂದುವರೆದ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಕ್ರೀಡಾ ಸಂಘಟನೆಗಾಗಿ ಬಳಸಿಕೊಳ್ಳುವುದು.

**7. ಭಾರತ ಸೇವಾದಳ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶಾಖೆಗಳ ಚಟುವಟಿಕೆಗಳ ಬಗ್ಗೆ:**

ಭಾರತ ಸೇವಾದಳ ಶಾಖೆಗಳ ತರಬೇತಿ ಮತ್ತು ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆಗಳಲ್ಲಿ ನಡೆಯುತ್ತಿರುವ ನೋಂದಣಿ ಬಗ್ಗೆ ಹಾಗೂ ತರಬೇತಿ ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಮಾರ್ಗದರ್ಶನ ಅಥವಾ ಮೇಲ್ವಿಚಾರಣೆಯನ್ನು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಕಡ್ಡಾಯವಾಗಿ ಮಾಡುವುದು ಅಗತ್ಯ ಎಂದು ತಿಳಿಸಲಾಯಿತು.

**8. ಕ್ರೀಡಾಕೂಟ ಸಂಘಟನೆಯ ಬಗ್ಗೆ ವಿಶೇಷ ಸೂಚನೆಗಳು:**

ಎಲ್ಲಾ ಹಂತದ ಕ್ರೀಡಾಕೂಟಗಳನ್ನು ಸಂಘಟಿಸುವ ಸಂದರ್ಭದಲ್ಲಿ ಸಂಘಟಕರು ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸುವುದು ಕಡ್ಡಾಯ.

1) ಸಂಘಟನಾ ಸ್ಥಳಕ್ಕೆ ಸಮರ್ಪಕ ಸಾರಿಗೆ ವ್ಯವಸ್ಥೆಯು ಇರುವಂತೆ ನೋಡಿಕೊಳ್ಳುವುದು.
2) ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.
3) ಬಾಲಕ/ಕಿಯರಿಗೆ ಪ್ರತ್ಯೇಕವಾದ ವಸತಿ ವ್ಯವಸ್ಥೆ ಮಾಡುವುದು.
4) ಅಗತ್ಯ ಕ್ರೀಡೋಪಕರಣಗಳ ವ್ಯವಸ್ಥೆ ಮಾಡುವುದು.
5) ಆಯಾ ಕ್ರೀಡೆಗಳಲ್ಲಿ ನುರಿತ ಹಾಗೂ ಪರಿಣಿತ ಪರಿವೀಕ್ಷಕರನ್ನು ಕ್ರೀಡಾ ತೀರ್ಪುಗಾರರನ್ನಾಗಿ ನೇಮಿಸುವುದು.
6) ಕ್ರೀಡಾ ಅಂಕಣಗಳ ವ್ಯವಸ್ಥೆ.
7) ಪ್ರಥಮ ಚಿಕಿತ್ಸೆ ವ್ಯವಸ್ಥೆ ಮಾಡುವುದು.
8) ಕ್ರೀಡಾ ಪಟುಗಳ ಆಯ್ಕೆ ಸಮಿತಿ ರಚನೆಯ ಸಂಪೂರ್ಣ ಉಸ್ತುವಾರಿ ಆಯಾ ಜಿಲ್ಲೆಯ ಉಪನಿರ್ದೇಶಕರು(ಆ) ಮತ್ತು ಆಯಾ ಜಿಲ್ಲೆಯ ದೈಹಿಕ ಶಿಕ್ಷಣ ಅಧಿಕಾರಿಯವರದ್ದಾಗಿರುತ್ತದೆ.
9) ನ್ಯಾಯನಿರ್ಣಾಯಕ ಸಮಿತಿ ರಚನೆ.

**9. ವಿವಿಧ ಹಂತದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು/ ತಂಡದ ಮೇಲ್ವಿಚಾರಕರು ಮತ್ತು ನಿರ್ಣಾಯಕರಿಗೆ ನೀಡಬಹುದಾದ ದಿನಭತ್ಯೆ/ ಗೌರವ ಸಂಭಾವನೆ ದರಗಳ ಬಗ್ಗೆ:**

| ಕ್ರ.ಸಂ | ಸಂಘಟನೆ ಹಂತಗಳು | ಕ್ರೀಡಾಪಟುಗಳಿಗೆ ದಿನಭತ್ಯೆ ರೂಗಳಲ್ಲಿ | ತಂಡದ ಮ್ಯಾನೇಜರ್‌ಗೆ/ ನಿರ್ಣಾಯಕರಿಗೆ ದಿನಭತ್ಯೆ ರೂಗಳಲ್ಲಿ | ಸಂಘ ಸಂಸ್ಥೆಗಳಿಂದ ನಿಯೋಜನೆಗೊಂಡ ನಿರ್ಣಾಯಕರಿಗೆ ಗೌರವ ಸಂಭಾವನೆ ದಿನವೊಂದಕ್ಕೆ ರೂಗಳಲ್ಲಿ |
|---|---|---|---|---|
| 1 | ಹೋಬಳಿ/ ವೃತ್ತ | 40-00 | 50-00 | - |
| 2 | ತಾಲ್ಲೂಕು ಮಟ್ಟ | 50-00 | 60-00 | - |
| 3 | ಜಿಲ್ಲಾ ಮಟ್ಟ | 60-00 | 70-00 | 250-00 |
| 4 | ವಿಭಾಗ ಮಟ್ಟ | 100-00 | 140-00 | 250-00 |
| 5 | ರಾಜ್ಯ ಮಟ್ಟ | 120-00 | 140-00 | 250-00 |



Kiran Raghupathi

| | | | | |
|---|---|---|---|---|
| 6 | ರಾಷ್ಟ್ರ ಮಟ್ಟ | 250–00 | 250–00 | – |
| 7 | ಮುಖ್ಯ ಮೇಲ್ವಿಚಾರಕರಿಗೆ | – | 300–00 | – |

**ವಿಶೇಷ ಸೂಚನೆಗಳು:–**

- ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ಶಾಲೆಯಲ್ಲಿ ಲಭ್ಯವಿರುವ ಕ್ರೀಡಾ ಚಾಲ್ತಿ ಅಥವಾ ಇತರೆ ಯಾವುದೇ ಸಂಚಿತ ನಿಧಿಯಿಂದ ಭರಿಸುವುದು.
- ವಲಯ/ತಾಲ್ಲೂಕು/ಜಿಲ್ಲಾ ಮಟ್ಟದ ಕ್ರೀಡಾಕೂಟಗಳಿಗೆ ಇಲಾಖೆಯು ಸಂಘಟಿಸುವ ಕಾರ್ಯಕ್ರಮಗಳಿಗೆ ತೆರಳುವ ಪಥ ಸಂಚಲನ ತಂಡ ಮತ್ತು ವಾದ್ಯ ತಂಡದ ವಿದ್ಯಾರ್ಥಿಗಳಿಗೆ ತಲಾ ರೂ.30/– ರಂತೆ ದಿನಭತ್ಯೆ ಹಾಗೂ ವಾಸ್ತವಿಕ ಬಸ್ ದರವನ್ನು **ಶಾಲೆಯಲ್ಲಿ ಲಭ್ಯವಿರುವ ಕ್ರೀಡಾ ಚಾಲ್ತಿ ಖಾತೆ ಅಥವಾ ಇತರೆ ಯಾವುದೇ ಸಂಚಿತ ನಿಧಿಯಿಂದ** ಭರಿಸಲು ಶಾಲಾ ಮುಖ್ಯಸ್ಥರಿಗೆ ಅನುಮತಿ ನೀಡಿದೆ. (ವಿದ್ಯಾರ್ಥಿಗಳ ಸಂಖ್ಯೆ ಗರಿಷ್ಠ 35 ಕ್ಕೆ ಮೀರಬಾರದು) (ಇಂತಹ ಖರ್ಚು ವೆಚ್ಚ ಗಳನ್ನು ಭರಿಸುವ ಬಗ್ಗೆ **ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರಿಂದ ಅನುಮತಿ ಪಡೆಯುವುದು.)**

**ಕ್ರಮ: ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು**

**10. ಗುರುತಿನ ಪತ್ರದ ಬಗ್ಗೆ:**

ರಾಜ್ಯಮಟ್ಟದಲ್ಲಿ ವಿಜೇತರಾಗಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸುವಂತಹ ಕ್ರೀಡಾಪಟುಗಳ ಮಾಹಿತಿಗಳನ್ನು ಆನ್‌ಲೈನ್ ಮುಖಾಂತರ ನಿಖರವಾದ ಮಾಹಿತಿಗಳನ್ನು ಕಳುಹಿಸಬೇಕಾಗಿರುತ್ತದೆ. ಆದುದರಿಂದ ಈ ಬಗ್ಗೆ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ವೈಯುಕ್ತಿಕ ಗಮನ ಹರಿಸಿ ಆಯಾ ತಾಲ್ಲೂಕು ಮಟ್ಟದ ದೈಹಿಕ ಶಿಕ್ಷಣ ಪರಿವೀಕ್ಷಕರುಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ ದೈಹಿಕ ಶಿಕ್ಷಣ ಪರಿವೀಕ್ಷಕರು ತಮ್ಮ ತಾಲ್ಲೂಕುಗಳಲ್ಲಿನ ವಿಜೇತರಾದ ಶಾಲಾ ಮಕ್ಕಳ ನಿಖರವಾದ ಮಾಹಿತಿಯನ್ನು ನೀಡುವಾಗ ಕೆಳಕಂಡ ಅಂಶಗಳನ್ನು ಮುಖ್ಯ ಶಿಕ್ಷಕರ ಗಮನಕ್ಕೆ ತಂದು ಮಾಹಿತಿಯನ್ನು ನೀಡುವಂತೆ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ತಿಳಿಸಲಾಯಿತು.

- ಪರಿಷ್ಕೃತ ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFIATE] ನ್ನೇ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು.
- ವಿದ್ಯಾರ್ಥಿಯ ಯೂ ಡೈಸ್ ಕೋಡ್ [U DISE CODE] ಸ್ಟೂಡೆಂಟ್ ಅಚೀವ್‌ಮೆಂಟ್ ಟ್ರಾಕಿಂಗ್ ಸಿಸ್ಟಮ್ ಸಂಖ್ಯೆ [STUDENT ACHIEVEMENT TRACKING SYSTEM NUMBER] ಮತ್ತು ಆಧಾರ್ ಸಂಖ್ಯೆಯನ್ನು [ADHAR NUMBER] ಕಡ್ಡಾಯವಾಗಿ ನಮೂದಿಸುವುದು [ಶಾಲಾ ಮುಖ್ಯ ಶಿಕ್ಷಕರಿಂದ ಧೃಢೀಕರಿಸಿದ ಆಧಾರ್ ಕಾರ್ಡ್ ಪ್ರತಿ ಲಗತ್ತಿಸುವುದು]
- ಗುರುತಿನ ಪತ್ರದೊಂದಿಗೆ ಹಿಂದಿನ ಸಾಲಿನ ಅಂಕಪಟ್ಟಿಯನ್ನು [PROGRESS CARD] ಕಡ್ಡಾಯವಾಗಿ ಲಗತ್ತಿಸುವುದು.
- ಭಾವಚಿತ್ರದೊಂದಿಗೆ ಎಲಿಜಿಬಿಲಿಟಿ ಸರ್ಟಿಫಿಕೇಟ್ ಕಡ್ಡಾಯವಾಗಿ ಎ–4 ಅಳತೆಯಲ್ಲಿರಬೇಕು.
- ಎಲಿಜಿಬಿಲಿಟಿ ಸರ್ಟಿಫಿಕೇಟ್ ನಲ್ಲಿ ಕ್ರೀಡಾಪಟುವಿನ ಭಾವಚಿತ್ರದ ಕೆಳಗೆ ಶಾಲೆಯ ಮೊಹರು ಹಾಗೂ ಮುಖ್ಯ ಶಿಕ್ಷಕರ ಸಹಿ ನಮೂದಿಸಬೇಕು, ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ [ಮುಖದ ಮೇಲೆ] ನಮೂದಿಸಬಾರದು. ರಾಷ್ಟ್ರಮಟ್ಟದ ಕ್ರೀಡಾ ಸ್ಪರ್ಧೆಗಳು ಬೇರೆ ಬೇರೆ ರಾಜ್ಯಗಳಲ್ಲಿ ನಡೆಯುವುದರಿಂದ ಕಡ್ಡಾಯವಾಗಿ ಆಂಗ್ಲಭಾಷೆಯ ಮೊಹರನ್ನೇ [ENGLISH SEAL] ಉಪಯೋಗಿಸುವುದು.



Kiran Raghupathi

- ಎಲಿಜಿಬಿಲಿಟಿ ಸರ್ಟಿಫಿಕೇಟ್ ನಲ್ಲಿ ಕ್ರೀಡಾಪಟುವಿನ ಹೆಸರು, ಶಾಲಾ ವಿಳಾಸ, ಹುಟ್ಟಿದ ದಿನಾಂಕ, ದಾಖಲಾತಿ ಸಂಖ್ಯೆ ನಮೂದಿಸುವಾಗ ದಾಖಲೆಗಳನ್ನು ಪರಿಶೀಲಿಸಿ ತಪ್ಪಿಲ್ಲದಂತೆ ದಪ್ಪ ಅಕ್ಷರಗಳಲ್ಲಿ [CAPITAL LETTERS] ಆಂಗ್ಲಭಾಷೆಯಲ್ಲಿ ಬರೆಯುವುದು.
- ಸಂಬಂಧಿಸಿದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರು ಶಾಲೆಯಲ್ಲಿರುವ ದಾಖಲೆಗಳನ್ವಯ ಭರ್ತಿ ಮಾಡುವುದು, ಯಾವುದೇ ಕಾರಣಕ್ಕೂ ಎಲಿಜಿಬಿಲಿಟಿ ಸರ್ಟಿಫಿಕೇಟ್ ನ್ನು ಕ್ರೀಡಾಪಟುಗಳಿಂದ ಭರ್ತಿ ಮಾಡಿಸತಕ್ಕದ್ದಲ್ಲ.
- ಎಲಿಜಿಬಿಲಿಟಿ ಸರ್ಟಿಫಿಕೇಟ್ ನ್ನು ಧೃಢೀಕರಿಸುವಾಗ ವಿದ್ಯಾರ್ಥಿಯ **ಸಹಿ, ಪೋಷಕರ ಸಹಿ/ದೂರವಾಣಿ/ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ** ನಮೂದಿಸಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಬೇಕು.
- ರಾಷ್ಟ್ರಮಟ್ಟದ ಕ್ರೀಡಾಕೂಟಗಳ ಬಗ್ಗೆ ಮಾಹಿತಿಗಳನ್ನು ಸಕಾಲದಲ್ಲಿ ನೀಡಲು ಎಲಿಜಿಬಿಲಿಟಿ ಸರ್ಟಿಫಿಕೇಟ್ ಗಳಲ್ಲಿ **ಶಾಲೆಗಳ/ಕ್ರೀಡಾಪಟುಗಳ ಮತ್ತು ಪೋಷಕರ ವಿಳಾಸ/ದೂರವಾಣಿ ಸಂಖ್ಯೆ/ಇ-ಮೇಲ್ ವಿಳಾಸಗಳನ್ನು** ಕಡ್ಡಾಯವಾಗಿ ನಮೂದಿಸುವುದು.
- ಕ್ರೀಡಾಪಟುಗಳ **ಟ್ರ್ಯಾಕ್‌ಸೂಟ್ ಹಾಗೂ ಷೂಗಳ ಅಳತೆ** ಇವುಗಳನ್ನು ನಿಖರವಾಗಿ ಮತ್ತು ತಪ್ಪದೇ ನಮೂದಿಸುವುದು.
- ಎಲಿಜಿಬಿಲಿಟಿ ಸರ್ಟಿಫಿಕೇಟ್ ನಲ್ಲಿ ನಿಗಧಿಪಡಿಸಿರುವ ಸ್ಥಳದಲ್ಲಿಯೇ ಶಾಲಾ ಮುಖ್ಯ ಶಿಕ್ಷಕರು ಸಹಿ ಹಾಗೂ ಮೊಹರಿನೊಂದಿಗೆ ದೃಢೀಕರಿಸಬೇಕು.
- ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಅರ್ಹರಾದ ಕ್ರೀಡಾಪಟುಗಳು ಎಲಿಜಿಬಲಿಟಿ ಸರ್ಟಿಫಿಕೇಟ್ ನೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿ ಹಾಗೂ ಜನನ ಪ್ರಮಾಣ ಪತ್ರದ ಪ್ರತಿಗಳನ್ನು ಶಾಲಾ ಮುಖ್ಯ ಶಿಕ್ಷಕರು ದೃಢೀಕರಿಸಿ ಸಲ್ಲಿಸುವುದು.
- ರಾಜ್ಯಮಟ್ಟ ಮತ್ತು ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನೀಡಲು ಸಲ್ಲಿಸಿರುವ ನಗದು ಬಹುಮಾನದ ಅರ್ಜಿಗಳಲ್ಲಿ ವಿದ್ಯಾರ್ಥಿಗಳ ಯೂನಿಕ್ ಡೈಸ್‌ಕೋಡ್ ನಂಬರನ್ನು ಮತ್ತು ಆಧಾರ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯ ಸಂಖ್ಯೆ, ಬ್ಯಾಂಕಿನ ಹೆಸರು ಮತ್ತು ಐಎಫ್‌ಎಸ್‌ಸಿ ಕೋಡ್‌ಗಳನ್ನು ಕಡ್ಡಾಯವಾಗಿ ನಮೂದಿಸುವುದು.

**11. ವಿಭಾಗ ಮತ್ತು ರಾಜ್ಯಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳ ಪಟ್ಟಿಯನ್ನು ಸಿದ್ಧಪಡಿಸಿ ಕೇಂದ್ರ ಕಛೇರಿಗೆ ಸಲ್ಲಿಸುವ ಬಗ್ಗೆ:**

ವಿಭಾಗ ಮಟ್ಟದಲ್ಲಿ ಪಂದ್ಯಾಟಗಳನ್ನು ಸಂಘಟಿಸುವ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಕ್ರೀಡಾ ಸ್ಪರ್ಧೆಗಳ ಫಲಿತಾಂಶ ಪಟ್ಟಿಯನ್ನು **ಕನಿಷ್ಠ ಒಂದು ವಾರ ಮುನ್ನ** ಸಂಬಂಧಿಸಿದ ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಸಂಘಟಿಸುವ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ತಪ್ಪದೇ ನೋಂದಣಿ ಅಂಚೆ ಮೂಲಕ ಅಥವಾ ಮುದ್ದಾಂ ತಲುಪಿಸುವುದು. ಅದರಂತೆ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಗನ್ನು ಆಯೋಜಿಸುವ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಸಂಘಟನಾ ದಿನಾಂಕದ ಬಗ್ಗೆ **ಕನಿಷ್ಠ 20 ದಿನಗಳಿಗಿಂತ ಮುಂಚಿತವಾಗಿ ಸುತ್ತೋಲೆ ಹೊರಡಿಸಲು** ತಿಳಿಸಲಾಯಿತು.



Kiran Raghupathi

**ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಬಗ್ಗೆ:**

- ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ನೀಡುವಾಗ, ಎಸ್.ಎ.ಟಿ.ಎಸ್ ನಲ್ಲಿರುವಂತೆ ನಿಖರವಾಗಿ ನೀಡಬೇಕು.
- ಉಪ ನಿರ್ದೇಶಕರ ಕಛೇರಿಗಳಲ್ಲಿ ದೈಹಿಕ ಶಿಕ್ಷಣ ವಿಷಯ ನಿರ್ವಾಹಕರು ಸಿದ್ಧಪಡಿಸಿದ ಕಡತವನ್ನು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಯವರ ಮುಖಾಂತರ ನೇರವಾಗಿ ಉಪನಿರ್ದೇಶಕರು (ಆ) ಗೆ ಕಡತ ಮಂಡಿಸಿ ಅನುಮೋದನೆ ಪಡೆದುಕೊಳ್ಳುವುದು.
- ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ರವರು ಆದಷ್ಟು ಶಾಲೆಗಳಿಗೆ ಭೇಟಿ ನೀಡಿ, ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡಲು ತಿಳಿಸಲಾಯಿತು. ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಡತಗಳು, ಮಕ್ಕಳಿಗೆ ತರಬೇತಿ ನೀಡುತ್ತಿರುವ ಬಗ್ಗೆ ದಾಖಲೆಗಳು, ಪಾಠಬೋಧನೆ ಬಗ್ಗೆ ಪರಿಶೀಲಿಸಲು ತಿಳಿಸಲಾಯಿತು.

ಸಭೆಗೆ ಆಗಮಿಸಿದ್ದ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಹಾಗೂ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

R 21/05/2022

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗೆ,

1. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು ಆಯುಕ್ತರ ಕಛೇರಿ ಬೆಂಗಳೂರು ರವರಿಗೆ ಮಾಹಿತಿಗಾಗಿ
2. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ಮತ್ತು ಧಾರವಾಡ ರವರಿಗೆ ಮಾಹಿತಿಗಾಗಿ
3. ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಆಪ್ತಶಾಖೆಗೆ ಮಾಹಿತಿಗಾಗಿ
4. ಮಾನ್ಯ ಅಪರ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ ಬೆಂಗಳೂರು ಆಪ್ತಶಾಖೆಗೆ ಮಾಹಿತಿಗಾಗಿ
5. ವಿಭಾಗೀಯ ಉಪ ನಿರ್ದೇಶಕರು (ದೈ.ಶಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಸಾ.ಶಿ. ಇಲಾಖೆ ಸೂಕ್ತ ಕ್ರಮ ವಹಿಸುವುದು.
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ ಉಪ ನಿರ್ದೇಶಕರು (ಆ) ರವರ ಮುಖಾಂತರ ಕ್ರಮ
9. ರಾಜ್ಯದ ಎಲ್ಲಾ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರ ಮುಖಾಂತರ ಕ್ರಮ
10. ಕಛೇರಿ ಪ್ರತಿ.



Kiran Raghupathi